ವಿಷಯ: ಧಾರವಾಡದ ಕೆ.ಸಿ.ಸಿ. ಬ್ಯಾಂಕ್‌ನ ಪುನಶ್ಚೇತನ ಕುರಿತು.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಉಪಾಧ್ಯಕ್ಷರೆ, ಬಹುಶಃ ಇಡೀ ರಾಷ್ಟ್ರದಲ್ಲಿಯೇ ಮೊಟ್ಟಮೊದಲನೆಯ ಸಹಕಾರಿ ಸಂಘ ಸ್ಥಾಪನೆಯಾದ ಜಿಲ್ಲೆಯೆಂದರೆ ಧಾರವಾಡ. ಇಡೀ ರಾಷ್ಟ್ರದಲ್ಲೇ ಮೊದಲ ಸ್ಥಾನದಲ್ಲಿರುವ ಜಿಲ್ಲಾ ಮಧ್ಯವರ್ತಿ ಬ್ಯಾಂಕ್–ಕೆಸಿಸಿ ಬ್ಯಾಂಕ್ ಆಗಿದೆ. ಈ ಬ್ಯಾಂಕಿನ ಸ್ಥಿತಿ ಇವೊತ್ತು ಏನಾಗಿದೆಯೆಂದರೆ, ಅದನ್ನು ಮುಚ್ಚುವಂತಹ ಸ್ಥಿತಿಗೆ ತಂದಿಟ್ಟಿದ್ದಾರೆ. ಬ್ಯಾಂಕ್ ನ ಸುಧಾರಣೆಗೆ ಏನೂ ಕ್ರಮ ಕೈಗೊಂಡಿಲ್ಲ. ಸರ್ಕಾರ ಇವೊತ್ತು ಮನಸ್ಸು ಮಾಡಿದರೆ ಅದು ಸರಿಯಾಗುತ್ತದೆ. ಸದರಿ ಬ್ಯಾಂಕ್‌ನೊಂದಿಗೆ ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಹೆಚ್.ಕೆ. ಪಾಟೀಲರಿಗೆ ನೇರವಾಗಿ ಸಂಬಂಧವಿತ್ತು. ಆದರೂ ಕೂಡ ಕಳೆದ ಸಲ ಮೀಟಿಂಗ್ ಮಾಡಿ ಅದರ ಪುನಶ್ಚೇತನಕ್ಕೆ ಏನು ಮಾಡಬೇಕೋ ಅದನ್ನು ಮಾಡಿದರು. ಬ್ಯಾಂಕ್ ನ ಪುನಶ್ಚೇತನಕ್ಕೆ ಸರ್ಕಾರ ಒಂದು ಪ್ಯಾಕೇಜ್ ಘೋಷಿಸಿ ಕೊಡುವುದಿರಲಿ, ಅದೇನು ಕೊಡುತ್ತಾರೋ ಬಿಡುತ್ತಾರೋ ಅದು ಬೇರೆ ವಿಷಯ. ಆದರೆ, ಕೊಡುವುದನ್ನು ಕೊಟ್ಟರೆ ಬ್ಯಾಂಕ್ ಸರಿಯಾಗಿ ಸುಧಾರಣೆಯಾಗುತ್ತದೆ. ಬ್ಯಾಂಕ್ ಈಗಾಗಲೇ ಸುಮಾರು 148 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿದೆ. ಬಡ್ಡಿ ಕೊಡುವುದೆಲ್ಲಾ ಸೇರಿಸಿಕೊಂಡರೆ ಬ್ಯಾಂಕ್ ಗೆ ಸರ್ಕಾರವೇ ಒಂದು ನೂರು ಕೋಟಿ ರೂಪಾಯಿಗಳನ್ನು ಹಣಕೊಡಬೇಕು 'ಏನು ಮಾಡಿದರೂ ಬಡ್ಡಿ ಮನ್ನಾ' ಎಂದು ಇಲ್ಲೆಲ್ಲಾ ಹೇಳುತ್ತಾರೆ. ಶೇಕಡ 25ರಷ್ಟು ನೀವು ಕೊಡಿ, ಶೇಕಡ 25 ರಷ್ಟು ಅಪೆಕ್ಸ್ ಬ್ಯಾಂಕ್ ನವರು ಕೊಡುತ್ತಾರೆ, ಉಳಿದದ್ದನ್ನು ನಾವು ಕೊಡುತ್ತೇವೆ. ಸರ್ಕಾರದ್ದು 36 ಕೋಟಿ, ಅಪೆಕ್ಸ್ ಬ್ಯಾಂಕ್‌ದು 18 ಕೋಟಿ ಮತ್ತು ಕೆಸಿಸಿ ಬ್ಯಾಂಕ್‌ನವರು 18 ಕೋಟಿ ಹಾಕಬೇಕು. ಲಿಕ್ವಿಡಿಟಿ ಆಗುವ ಸ್ಟೇಜ್‌ಗೆ ಬಂದಿರುವಂತಾದ್ದನ್ನು ಸುಧಾರಿಸುವುದು ಬಿಟ್ಟು ಅದಕ್ಕೆ ಹಾಕಬೇಕೆಂದರೂ, ಯಾರೋ ಅಡ್ಮಿನಿಸ್ಟ್ರೇಟರ್ ಇದ್ದರು, 'ಹೂಂ' ಅಂದರು ಮಾಡಿದರು. ಇವೊತ್ತು ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ, ಸುಮ್ಮನೆ ಹೇಳುತ್ತಾರೆ. ಇವೊತ್ತು ಬಡ್ಡಿ ಕನ್‌ಸೇಷನ್‌ನಿಂದ ಇವರೇ 75 ಕೋಟಿ ರೂಪಾಯಿಗಳಷ್ಟು ಹಣ ಕೊಡಬೇಕಾಗುತ್ತದೆ. ಆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆಂಬುದನ್ನು ಹೇಳಬೇಕು. ಮಾನ್ಯ ಚೆಲುವರಾಯ ಸ್ವಾಮಿಯವರೆ, ದಯಮಾಡಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿರುವ ಹೆಚ್.ಕೆ. ಪಾಟೀಲರನ್ನು ಬಿಟ್ಟುಬಿಡಿ. ಕೋ–ಆಪರೇಟಿವ್ ಮಿನಿಸ್ಟರ್ ಇಲ್ಲದಿರುವುದರಿಂದ ಅವರೇ ಉತ್ತರ ಕೊಡುವವರಿದ್ದಾರೆ. ಸರ್ಕಾರದವರು 73

ಕೋಟಿ ರೂಪಾಯಿಗಳನ್ನು ಕೊಡಬೇಕು. ನಂತರ, 25 ಕೋಟಿ ರೂಪಾಯಿಗಳನ್ನು ಏನು ಮಾಡಿದ್ದಾರೆಂಬುದನ್ನು ಉತ್ತರದಲ್ಲಿ ಹೇಳುತ್ತಾರೆ. '36 ಬ್ಯಾಂಕ್ ಗಳಿಂದ ಅಲ್ಪಾವಧಿ, ಮಧ್ಯಮಾವಧಿ, ಸುಸ್ತಿ ಸಾಲಗಳೂ ಸೇರಿದಂತೆ ಒಟ್ಟು 25 ಕೋಟಿ ರೂಪಾಯಿಗಳ ಮನ್ನಾ ಮಾಡಲು ಮಂಜೂರು ಮಾಡಿರುತ್ತದೆ. ಈ ಹಣವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ' ಇನ್ನೂ ಬಿಡುಗಡೆ ಮಾಡಿಲ್ಲ ಕೋರಲಾಗಿದೆ ಅಷ್ಟೇ. ಆದರೆ, ಒಂದು ವರ್ಷದಿಂದಲೂ ಬ್ಯಾಂಕ್‌ಗೆ 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಹಾಗಾದರೆ, ಇದು ಉತ್ತರ ಹೇಗಾಗುತ್ತದೆ? ಆ ಕಾರಣಕ್ಕೋಸ್ಕರ, ಒಂದು ನೂರು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡುವುದು, ಅದು ದಾನ ಕೊಡುವುದಲ್ಲ ಅಥವಾ ಪ್ಯಾಕೇಜ್ ಘೋಷಿಸಿ ಕೊಡುವುದಲ್ಲ. ಕಾಯಿದೆ ಪ್ರಕಾರ ಬಡ್ಡಿ ಮನ್ನಾ ಮಾಡಿ ಕೊಡುವ ಒಂದು ನೂರು ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಇನ್ನೊಂದು, ಪ್ಯಾಕೇಜ್ ವಿಚಾರ ಉದ್ಧಾರ ಮಾಡುವಂತಾದ್ದು ನಾನು ಹೇಳಲಿಲ್ಲ. ಇದೆಲ್ಲವನ್ನೂ ಓದಿಕೊಂಡು ಕುಳಿತರೆ ಬಹಳ ಹೊತ್ತು ಹಿಡಿಯುತ್ತದೆ. ಅಲ್ಲದೆ, ತಾವೂ ಕೂಡ ಹೆಚ್ಚು ಹೇಳಬಾರದೆಂದು ಹೇಳುತ್ತೀರಿ. ಅದಕ್ಕೋಸ್ಕರ, ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಒಂದು ನೂರು ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಬ್ಯಾಂಕ್‌ನ ಪುನಶ್ಚೇತನಕ್ಕೆ ಯಾವ ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ? ಇಡೀ ಮೂರು ಜಿಲ್ಲೆಗಳ ರೈತರು ಇದರಿಂದ ಬಹಳ ತೊಂದರೆಗೊಳಗಾಗಿದ್ದರೆ. ಅರ್ಬನ್ ಬ್ಯಾಂಕ್ ಗಳೆಲ್ಲವೂ ಮುಳುಗಿ ಹೋಗಿವೆ. ಆದುದರಿಂದ, ಒಂದು ನೂರು ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ? ಈಗ ಸಂಸ್ಕರಣ ಘಟಕಗಳಿಗೆ ಸರ್ಕಾರದವರೆ ಕೊಡಿಸಿರುತ್ತಾರೆ. ಸುಮಾರು ನೂರು ಕೋಟಿ ಅಲ್ಲಿ ಬರಬೇಕಾಗಿದೆ. ಟೆಕ್ಸ್ ಟೈಲ್ಸ್ ಮಿಲ್ಲು, ಆಯಿಲ್ ಮಿಲ್ಲು, ಕೋ-ಆಪರೇಟೀವ್ ಮಿಲ್ಲು ಇದಕ್ಕೆಲ್ಲಾ ಕೊಟ್ಟಿರುತ್ತಾರೆ. ಇದಕ್ಕೆಲ್ಲಾ ಕೊಟ್ಟಿರುವ ಅಸಲು ಬಡ್ಡಿ ಸೇರಿಸಿ ಸುಮಾರು ನೂರು ಕೋಟಿ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಒಂದು ಪ್ಯಾಕೆಜ್ ಮಾಡಿ ಲಾಂಗ್ ಟರ್ಮ್ ಮಾಡಿಬಿಟ್ಟರೆ, ಅದೊಂದು ನೂರು ಕೋಟಿ ಇವರು ಕೊಡುವುದು ಒಂದು ನೂರು ಕೋಟಿ, ಇದನ್ನು ಕೊಟ್ಟರೆ ಇವತ್ತೇ ಬ್ಯಾಂಕ್ ಸರಿಯಾಗಿಬಿಡುತ್ತದೆ. ಏನೇನೂ ಆಗಿಲ್ಲ, ಇವತ್ತೇ ಅದು ರಿವೈವ್ ಆಗುತ್ತದೆ. ಆದರೆ ದುರ್ದೈವದಿಂದ ಸರ್ಕಾರದವರು ಕೊಡುತ್ತಿಲ್ಲ. ಮತ್ತೆ ಪುನಃ ಈಗ ಬಡ್ಡಿ ಮನ್ನಾ ಎಂದು ಹೇಳಿದ್ದಾರೆ. ಅದು ಎಷ್ಟಾಗುತ್ತದೆ? ನಾಳೆ ಅದನ್ನು ರೈತರು ಹಚ್ಚಲು ಶುರು ಮಾಡಿದರೆ ಪುನಃ ಅದು 80 ಕೋಟಿ ಕೊಡುತ್ತದೆ.

ಇದನ್ನೆಲ್ಲ ಬಿಡುಗಡೆ ಮಾಡದಿದ್ದರೆ ಆ ಬ್ಯಾಂಕ್ ಉದ್ಧಾರವಾಗುವುದು ಯಾವಾಗ? ಈ ಕಾರಣದಿಂದ ಮಾನ್ಯ ಸಚಿವರನ್ನು ನಾನು ನೇರವಾಗಿ ಕೇಳುತ್ತಿದ್ದೇನೆ, ಆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಮತ್ತು ಅದನ್ನು ಸುಧಾರಿಸಲು ಏನು ಪ್ಯಾಕೇಜ್ ಮಾಡಿದ್ದೀರಿ? ಇನ್ನೊಂದು ನನ್ನ ಸಲಹೆ, ಇವರನ್ನೇ ಆಡಳಿತಾಧಿಕಾರಿಗಳನ್ನಾಗಿ ಇಟ್ಟುಕೊಂಡರೆ ಅದು ಎಂದೂ ಸುಧಾರಿಸಲು ಸಾಧ್ಯವಿಲ್ಲ. ಇನ್ನೂ ಹತ್ತು ಪಟ್ಟು ಇಡಲಿ ಅದನ್ನು ಮುಚ್ಚಿ ಹೋಗುತ್ತಾರೆ ಹೊರತು ಅದನ್ನು ಸುಧಾರಿಸಲು ಸಾಧ್ಯವಿಲ್ಲ. ಆಕಾರಣದಿಂದ ಚುನಾವಣೆ ಮಾಡಿ ಆಡಳಿತ ಮಂಡಳಿಯನ್ನು ತಂದು ಆಡಳಿತಾಧಿಕಾರಿಯವರಿಗೆ ಏನು ಸಹಾಯ ಮಾಡುತ್ತೀರೊ ಅದೆಲ್ಲಾ ಸಹಾಯವನ್ನು ಇವರಿಗೆ ಮಾಡಿದರೆ ಜನರ ವಿಶ್ವಾಸವನ್ನು ಗಳಿಸಿಕೊಂಡರೆ ಖಂಡಿತವಾಗಿ ಆ ಬ್ಯಾಂಕ್ ಉಳಿಯುತ್ತದೆ. ಇವತ್ತು ಕೂಡ ಹಾವೇರಿ ಬ್ಯಾಂಕು ಚೆನ್ನಾಗಿಯೆ ನಡೆಯುತ್ತಿದೆ. ಡಿ.ಸಿ.ಸಿ. ಬ್ಯಾಂಕ್‌ನ ಹಾವೇರಿ ಬ್ರಾಂಚ್ ಇವತ್ತಿಗೂ ಚೆನ್ನಾಗಿಯೇ ನಡೆಯುತ್ತಿದೆ. ಆ ಕಾರಣದಿಂದ ಮಾನ್ಯ ಸಚಿವರು ಇದನ್ನೆಲ್ಲ ಯಾವಾಗ ಮಾಡುತ್ತಾರೆ ಎಂಬುದನ್ನು ನನಗೆ ಹೇಳಬೇಕಾಗುತ್ತದೆ. ಅಪೆಕ್ಸ್ ಬ್ಯಾಂಕ್ ನಿಂದ ತುಂಬಿ ಎನ್ನುತ್ತಾರೆ. ಅಪೆಕ್ಸ್ ಬ್ಯಾಂಕ್‌ನ ಸ್ಥಿತಿಯನ್ನು ಹೇಳಿಬಿಡುತ್ತೇನೆ. ಅಪೆಕ್ಸ್ ಬ್ಯಾಂಕ್ ಈಗಾಗಲೇ 2001–02 ರಲ್ಲಿ ಲಾಭ 20 ಕೋಟಿ ಇತ್ತು, 2002–03ಕ್ಕೆ 10 ಕೋಟಿ 55 ಲಕ್ಷ ಲಾಭವಾಗಿದೆ, ಈಗ 2 ಕೋಟಿ 27 ಲಕ್ಷ ಲಾಭವಾಗಿದೆಯೆಂದು ಹೇಳುತ್ತಾರೆ. ಇದು ಹೆಚ್ಚಿನ ಲಾಭವೇನಲ್ಲ, 18 ಕೋಟಿ ಕೆ.ಸಿ.ಸಿ. ಬ್ಯಾಂಕ್‌ಗೆ ಅವರು ತುಂಬಿದರೆ 16 ಕೋಟಿ ಹಾನಿಯಲ್ಲಿ ಬರುತ್ತಾರೆ. ಇನ್ನೂ ಐದಾರು ಕೋಟಿ ಅವರು ಕೊಡುವುದು ಇದೆ. ಇದೆಲ್ಲಾ ಸೇರಿ ಇವತ್ತು ಕೆ.ಸಿ.ಸಿ. ಬ್ಯಾಂಕ್ ಗೆ ಬರತಕ್ಕ ಹಣವನ್ನು ಸರ್ಕಾರ ಎಂದು ತುಂಬುತ್ತದೆ? ಅದನ್ನು ಸುಧಾರಿಸಲು ಏನೇನು ಪ್ಯಾಕೇಜ್ ಮಾಡಿದ್ದಾರೆ? ಇದನ್ನು ಯಾವಾಗ ರಿವೈವ್ ಮಾಡಿ ಅಡಳಿತ ಮಂಡಳಿಯನ್ನು ತರುತ್ತೀರ ಎಂಬುದನ್ನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಸ್. ಎಸ್. ಪಾಟೀಲರು ಸಾಕಷ್ಟು ವಿಷಯಗಳನ್ನು ಇದರ ಬಗ್ಗೆ ಹೇಳಿದ್ದಾರೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ಏನಾಗಿದೆ ಎಂದರೆ, ಇಲ್ಲಿ ಏನಾಗಿದೆ ಎಂಬ ಬಗ್ಗೆ ಮಾನ್ಯ ಹೆಚ್.ಕೆ. ಪಾಟೀಲರಿಗೂ ಗೊತ್ತಿದೆ, ಎಸ್. ಎಸ್. ಪಾಟೀಲರಿಗೂ ಗೊತ್ತಿದೆ ಡಿ.ಸಿ.ಸಿ. ಬ್ಯಾಂಕ್ ಆರ್ಥಿಕ ದುಸ್ಥಿತಿಯಿಂದ ಮುಳಿಗಿಹೋಗಿದ್ದರಿಂದ ಇಡೀ ಧಾರವಾಡ ಜಿಲ್ಲೆ, ಕೇವಲ ಧಾರವಾಡ ಜಿಲ್ಲೆಯಲ್ಲ

ಅನ್ ಡಿವೈಡೆಡ್ ಧಾರವಾಡ ಜಿಲ್ಲೆ, ಹಾವೇರಿ ಜಿಲ್ಲೆ ಮತ್ತು ಗದಗ್ ಜಿಲ್ಲೆ, ಅಲ್ಲಿದ್ದಂಥ ಎಲ್ಲಾ ಕೋ-ಆಪರೇಟೀವ್ ಅರ್ಬನ್ ಬ್ಯಾಂಕ್ಸ್ ನವರು ಕಾನೂನುಬದ್ಧವಾಗಿ ಏನು ಕೆ.ಸಿ.ಸಿ. ಬ್ಯಾಂಕ್‌ನಲ್ಲಿ ಡಿಪಾಸಿಟ್ ಹಣವನ್ನು ಇಡಬೇಕು ಅ ರೂಲ್ಸ್ ಇದ್ದಿದ್ದರಿಂದ ಅಲ್ಲಿ ಇಟ್ಟಿದ್ದಾರೆ. ಈಗ ಸರ್ಕಾರವೆ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ನೀವು ಗೈಡ್ ಲೈನ್ಸ್ ಮಾಡಿದ್ದೀರಿ ರೂಲ್ಸ್ ಮಾಡಿದ್ದೀರಿ. ನೀವು ಅ ರೀತಿ ರೂಲ್ಸ್ ಇಟ್ಟಿದ್ದರಿಂದ ಇವತ್ತು ಆ ಅರ್ಬನ್ ಬ್ಯಾಂಕ್ಸ್‌ನವರು ಡಿಪಾಜಿಟ್ ಇಟ್ಟರು, ಆ ಡಿಪಾಜಿಟ್ ವಾಪಸ್ ಕೊಡಲು ಇವತ್ತು ಕೆ.ಸಿ.ಸಿ. ಬ್ಯಾಂಕ್‌ನವರಿಗೆ ಆಗುತ್ತಿಲ್ಲ. ಆ ಡಿಪಾಜಿಟ್ ಕೊಡುವಂಥವರು ಯಾರು? ಇವತ್ತು ಆ ಅರ್ಬನ್ ಬ್ಯಾಂಕ್ಸ್‌ನ ಕಸ್ಟಮರ್ಸ್ ಯಾರಿದ್ದರೆ ಅವರಿಗೆ ಸಹ ಡಿಪಾಜಿಟ್ ವಾಪಸ್ ತೆಗೆದುಕೊಳ್ಳಬೇಕೆಂದರೆ ಇಲ್ಲ, ಹೊಸದಾಗಿ ಸಾಲ ಕೊಡಲು ಆಗುತ್ತಿಲ್ಲ, ಅದರಲ್ಲಿ ಕಳೆದ ಮೂರ್ನಾಕು ವರ್ಷದ ಬರಗಾಲದಿಂದ ಕೃಷಿ ಸಾಲ ವಾಪಸ್ ಆಗಲಿಲ್ಲ, ವಸೂಲಾತಿಯಾಗಲಿಲ್ಲ, ಹೀಗಾಗಿ ಅದರ ಬಗ್ಗೆ ಏನು ಎನ್ನುವಂಥದ್ದು, ಇವತ್ತು ಸರ್ಕಾರ ಕೆಲವೊಂದು ಪ್ಯಾಕೆಜ್‌ಗಳನ್ನು ಘೋಷಣೆ ಮಾಡಿದರು. ಹಿಂದೆ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 25 ಕೋಟಿ ಕೊಡುತ್ತೇವೆಂದರು. ಇವತ್ತಿನವರೆಗೆ ಒಂದು ಪೈಸೆ ಬರಲಿಲ್ಲ. ಹೋಗಲಿ ತಾವೇನು ಭರವಸೆಯನ್ನು ಕೊಟ್ಟಿದ್ದೀರಿ ಬಡ್ಡಿ ಮನ್ನಾ ಹಣ ಅದೂ ಬರಲಿಲ್ಲ ಮತ್ತು ಅಪೆಕ್ಸ್ ಬ್ಯಾಂಕ್ ನಿಂದ ಕೊಡಿಸಬೇಕೆಂಬುದು ಅದೂ ಬರಲಿಲ್ಲ, ಇದನ್ನು ನಿಮ್ಮ ಉತ್ತರದಲ್ಲೇ ಕೊಟ್ಟಿದ್ದೀರಿ, ಇಲ್ಲಿ ಹೇಳಿದ್ದೀರಿ, ಅರ್ಬನ್ ಬ್ಯಾಂಕ್‌ಗಳಿಗೆ 16 ಕೋಟಿ ರೂಪಾಯಿಯೊಳಗೆ 8 ಕೋಟಿ ಮಾತ್ರ ಕೊಟ್ಟಿದ್ದೀರಿ, ಆಮೇಲೆ ಮುಂದೆ ಬಡ್ಡಿ ಮನ್ನಾದ್ದು, ಸುಸ್ತಿ ಬಡ್ಡಿ ಮನ್ನಾದ್ದು 25 ಕೋಟಿ ರೂಪಾಯಿಯಲ್ಲಿ ನೀವು ಇಲ್ಲಿಯವರೆಗೆ ಹಣವನ್ನು ಕೊಡಲಿಲ್ಲ. ಈ ರೀತಿ ಆಗಿದ್ದರಿಂದ ತಾವು ಕೊಡಬೇಕಾದಂಥಹ ಹಣವನ್ನೂ ಕೊಡಲಿಲ್ಲ. ಅನಂತರ ಕೆ.ಸಿ.ಸಿ. ಬ್ಯಾಂಕ್ ಬದುಕುತ್ತದೆ, ಲಕ್ಷಾಂತರ ರೈತರಿಗೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಅರ್ಬನ್ ಬ್ಯಾಂಕ್ಸ್‌ಗಳೆಲ್ಲಾ ಕೊಲ್ಯಾಪ್ಸ್ ಆಗುತ್ತದೆ. ಆದ್ದರಿಂದ ಇಮೀಡಿಯೇಟ್ ಲಿ ಇದರ ಬಗ್ಗೆ ಏನಾದರು ರೆಮಿಡಿ ಹುಡುಕತಕ್ಕದ್ದು, ತಕ್ಷಣ ಕ್ರಮಕೈಗೊಳ್ಳುವಂಥದ್ದು ಆಗಬೇಕು. ಇಲ್ಲದಿದ್ದರೆ ಯಾರು ತಪ್ಪು ಮಾಡಿದ್ದಾರೆ. ಇವತ್ತೇನು ಕೆ.ಸಿ.ಸಿ. ಬ್ಯಾಂಕ್ ದುರ್ಬಲವಾಗಲು ಯಾರು ತಪ್ಪು ಮಾಡಿದ್ದಾರೆ, ಮತ್ತು ಎಲ್ಲಿ ಸಾಲ ವಸೂಲಾತಿಯಾಗಿಲ್ಲ ಅಲ್ಲಿ ಸ್ಪೆಕ್ಟ್ ಲಿ ಆಕ್ಷನ್ ತೆಗೆದುಕೊಳ್ಳಬೇಕು. ಅಂದಾಗ ಮಾತ್ರ ಈ ಕೆ.ಸಿ.ಸಿ. ಬ್ಯಾಂಕನ್ನು ಪುನರು ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಕೆ.ಸಿ.ಸಿ. ಬ್ಯಾಂಕ್ ನ ಹಣಕಾಸಿನ ಪರಿಸ್ಥಿತಿ ಸ್ವಲ್ಪ ತೊಂದರೆಗೆ ಬಂದಿದ್ದು ಸರ್ಕಾರ ಈ ಮೊದಲು

ಏನೇನು ಈ ಸದನದಲ್ಲಿ ಭರವಸೆಯನ್ನು ಕೊಟ್ಟಿತ್ತು ಅದನ್ನು ಈಡೇರಿಸುವಲ್ಲಿ ಹಿಂದೇಟು ಹಾಕುತ್ತಿದೆ. ಆದ್ದರಿಂದಾಗಿ ಸಹಕಾರಿ ಚಳುವಳಿಗೆ ಸಾಕಷ್ಟು ತೊಂದರೆ ಧಾರವಾಡ, ಹಾವೇರಿ ಮತ್ತು ಗದಗ್ ಜಿಲ್ಲೆಗಳಲ್ಲಿ ಆಗುತ್ತಿದೆ. ಜಗದೀಶ್ ಶೆಟ್ಟರ್‌ರವರು ಹೇಳಿದಂತೆ ಬಹಳಷ್ಟು ಅರ್ಬನ್ ಬ್ಯಾಂಕುಗಳು ಹಣವನ್ನು ಕೆ.ಸಿ.ಸಿ. ಬ್ಯಾಂಕ್‌ನಲ್ಲಿ ಇಟ್ಟಿದೆ. ಅವರು ಡಿಪಾಜಿಟ್‌ನ್ನು ಸದಸ್ಯರಿಂದ ತೆಗೆದುಕೊಂಡಿದ್ದಾರೆ. ಅದನ್ನು ಮರುಪಾವತಿ ಮಾಡುವಲ್ಲಿ ಸಾಕಷ್ಟು ತೊಂದರೆ ಅವರಿಗೆ ಆಗುತ್ತಿದೆ. ಆದರೂ ಜನರೂ ಸಹಕಾರ ಮಾಡುತ್ತಿದ್ದಾರೆ, ಅರ್ಬನ್ ಬ್ಯಾಂಕ್‌ನವರೂ ಸಹಕಾರ ಮಾಡುತ್ತಿದ್ದಾರೆ ಆದರೆ ಸರ್ಕಾರ ಏಕೋ ತಾನು ಮಾಡಬೇಕಾದ ಕರ್ತವ್ಯವನ್ನು ಇಲ್ಲಿಯವರೆಗೆ ಮಾಡಿಲ್ಲ, ತಾನು ಭರವಸೆ ಕೊಟ್ಟಂಥ ಕೆಲಸಗಳನ್ನೂ ಮಾಡಿಲ್ಲ. ದಯವಿಟ್ಟು ಶತಮಾನೋತ್ಸವವನ್ನು ಅಚರಿಸುವಂಥ ಈ ಪ್ರಸಂಗದಲ್ಲಾದರೂ ಈ ಎಲ್ಲಾ ತಾಪತ್ರಯಗಳನ್ನು ಸಂಪೂರ್ಣವಾಗಿ ಬಗೆಹರಿಸಿ ಸರ್ಕಾರ ಈ ಸದನದಲ್ಲಿ ಕೊಟ್ಟ ಭರವಸೆಯನ್ನು ಈಡೇರಿಸಿ ಆ ಸಂಸ್ಥೆ ಪುನಶ್ಚೇತನಗೊಳ್ಳುವ ಹಾಗೆ ಮಾಡಬೇಕು, ಆ ಸಂಸ್ಥೆಯ ಮೂಲಕ ಉಳಿದೆಲ್ಲಾ ಅರ್ಬನ್ ಬ್ಯಾಂಕ್ಸ್ ಮತ್ತು ಪತ್ತಿನ ಸಹಕಾರಿ ಸಂಘಗಳ ಉಳಿದ ಸಹಕಾರಿ ಸಂಘಗಳ ಮತ್ತು ಅನೇಕ ಡಿಪಾಜಿಟರ್ಸ್ ನಿರಾತಂಕವಾಗಿ ಕೆಲಸ ಮಾಡುವಂಥ ವ್ಯವಸ್ಥೆಯನ್ನು ರೂಪಿಸುವಲ್ಲಿ ಸರ್ಕಾರ ತೀವ್ರ ಕ್ರಮಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲರು ಜಗದೀಶ್ ಶೆಟ್ಟರ್‌ರವರು, ಡಿ.ಆರ್. ಪಾಟೀಲ್‌ರವರು ಕೆ.ಸಿ.ಸಿ. ಬ್ಯಾಂಕ್‌ನ್ನು ಪುನಶ್ಚೇತನ ಗೊಳಿಸುವ ವಿಚಾರದಲ್ಲಿ ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಶೂನ್ಯವೇಳೆಯಲ್ಲಿ ತರುವ ವಿಚಾರವೇ ಅಲ್ಲ ಇದು. ಅವರುಗಳನ್ನು ಒಟ್ಟಿಗೆ ಸೇರಿಸಿ ಬೇರೆ ನಿಯಮವನ್ನು ಅಳವಡಿಸಿಕೊಂಡಿದ್ದರೆ ಚರ್ಚೆಗೆ ಹಾಗೂ ತಮಗೆ ಉತ್ತರ ಬರುವುದಕ್ಕೆ ಹೆಚ್ಚು ಅನುಕೂಲವಾಗುತ್ತಿತ್ತು. ಆದರೆ ಸುದೈವದಿಂದ ಮಾನ್ಯ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ ಇದ್ದಾರೆ. ತಾವು ಈಗ ಏನು ಹೇಳಿದ್ದಿರಿ..

ಶ್ರೀ ಎಸ್.ಎಸ್. ಪಾಟೀಲ್: ಬಜೆಟ್ ಭಾಷಣ ಮಾಡುವಾಗ ಇದನ್ನೆಲ್ಲಾ ಹೇಳಿದ್ದೇವೆ. ಎಲ್ಲಾ ಮಾತನಾಡಿದ್ದೇವೆ. ಆದರೆ ಏನೂ ಉತ್ತರ ಬರಲಿಲ್ಲ ಒಂದು ನಯಾಪೈಸೆ ಉತ್ತರ ಬರಲಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್: ಸರ್ಕಾರ ಭರವಸೆಯನ್ನು ಕೊಟ್ಟಿದೆ. ಸರ್ಕಾರ ಎಷ್ಟು ಕೆ.ಸಿ.ಸಿ. ಬ್ಯಾಂಕಿಗೆ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು, ಅಪೆಕ್ಸ್ ಬ್ಯಾಂಕ್ ನವರು ತಮ್ಮ ಪಾತ್ರವನ್ನೇನು ಮಾಡಬೇಕಾಗಿತ್ತು, ಅಪೆಕ್ಸ್ ಬ್ಯಾಂಕ್

ಇಂಥ ಪುನಶ್ಚೇತನ ಅವಶ್ಯವಿದ್ದ ಸಂಸ್ಥೆಗಳಿಗೆ ಒಂದು ರೀತಿ ತಾಯಿಯ ರೂಪದಲ್ಲಿದ್ದು ಪುನಶ್ಚೇತನಗೊಳಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಆದರೆ ದುರ್ದೈವದಿಂದ ಕೆ.ಸಿ.ಸಿ. ಬ್ಯಾಂಕ್ ನ ವಿಚಾರದಲ್ಲಿ ಒಬ್ಬ ಸಹಕಾರಿಯಾಗಿ ಹೇಳುವುದೆನೆಂದರೆ, ಯಾರೂ ಅದರ ಬಗ್ಗೆ ಕಾಳಜಿ ಏನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ, ಸರ್ಕಾರಗಳು ಸಹ ಭರವಸೆಯನ್ನು ಕೊಟ್ಟಿದ್ದರೂ ಇನ್ನೂ ಮಾಡಬೇಕಾದದ್ದು ಇದೆ ಎನ್ನುವುದರಲ್ಲಿ ಎರಡು ಅಭಿಪ್ರಾಯಗಳು ಇಲ್ಲ ಆದರೆ, ನಮಗೆ ಈ ಸಮಸ್ಯೆ ಬಗೆಹರಿಯಬೇಕು, ಕೆ.ಸಿ.ಸಿ. ಬ್ಯಾಂಕು ಏಕೆ ಕೆಟ್ಟಿತು, ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದರು, ಅದು ಏಕೆ ಕೆಟ್ಟಿತು, ಏಕೆ ಅಶಕ್ತವಾಯಿತು, ಆ ಪೋಸ್ಟ್ ಮಾರ್ಟಮ್‌ನ್ನು ನಂತರ ಮಾಡೋಣ. ಆದರೆ, ಸದ್ಯ ಈ ಸಂದರ್ಭದಲ್ಲಿ ಅದನ್ನು ಪುನಶ್ಚೇತನಗೊಳಿಸಬೇಕಾಗಿರುವುದಕ್ಕೆ ಸರ್ಕಾರ ತೀವ್ರ ಆಸಕ್ತಿಯನ್ನು ಹೊಂದಿದೆ. ಇದು ಇಂಟ್ರಾಡಿಪಾರ್ಟ್‌ಮೆಂಟ್ ಅಲ್ಲದೆಯೆ ಇಂಟ್ರಾ ಇನ್ಸ್‌ಟ್ಯೂಷನ್ ಸಪೋರ್ಟ್ ಸಿಕ್ಕಾಗ ಮಾತ್ರ ಈ ಕೆ.ಸಿ.ಸಿ. ಬ್ಯಾಂಕನ್ನು ಉಳಿಸಿಕೊಳ್ಳಬಹುದು. ಒಂದು ವೇಳೆ ಯಾವುದೇ ಕಾರಣಕ್ಕೆ ಕೆ.ಸಿ.ಸಿ. ಬ್ಯಾಂಕು ನಮ್ಮಲ್ಲಿ ಉಳಿಯುವುದಿಲ್ಲವೆಂದರೆ ಸಹಕಾರ ಕ್ಷೇತ್ರವೆ ಅಲ್ಲಿ ಅಭದ್ರ ವಾಗತಕ್ಕ ಅನಿವಾರ್ಯತೆ ಅಂಥ ಭಯಾನಕವಾದ ಸ್ಥಿತಿ ನಿರ್ಮಾಣವಾಗುತ್ತದೆ. ಆ ಹಿನ್ನೆಲೆಯೊಳಗೆ ನಾನು ತಾವು ಮೂರು ಜನ ಹಿರಿಯ ಸಹಕಾರಿಗಳು, ನಾಯಕರುಗಳೂ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ, ಅವಸರ ಮಾಡಿದರೆ ಏನೂ ಆಗುವುದಿಲ್ಲ ಜಗದೀಶ್ ಶೆಟ್ಟರ್‌ರವರೆ?

ಶ್ರೀ ಜಗದೀಶ್ ಶೆಟ್ಟರ್: ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಹೇಳಿ. 25 ಕೋಟಿ ಬಿಡುಗಡೆ ಮಾಡುವುದಕ್ಕೆ ಹೇಳಿದ್ದೇವೆ. ಆ ಹಣ ಯಾವಾಗ ಬರುತ್ತದೆ?

ಶ್ರೀ ಹೆಚ್.ಕೆ. ಪಾಟೀಲ್: ತಮಗೆ ಅನುಷ್ಠಾನವಾಗದೆ ಇರುವ ಭರವಸೆ ಬೇಕೊ? ಇದರ ಪುನಶ್ಚೇತನ ಆಗಬೇಕೊ? ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿದ್ದಾರೆ, ಆದ್ದರಿಂದ ಅವರಲ್ಲಿ ವಿನಂತಿ ಮಾಡುತ್ತೇನೆ, ಅವರ ನೇತೃತ್ವದೊಳಗೆ ಎಂಟು ಹತ್ತು ದಿವಸದೊಳಗೆ ಒಂದು ಸಭೆ ಕರೆಯೋಣ.

ಶ್ರೀ ಹೆಚ್.ಕೆ. ಪಾಟೀಲ್ (ಮುಂದು):– ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಆದ್ದರಿಂದ ನಾನು ಅವರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಅವರ ನೇತೃತ್ವ ದಲ್ಲಿ 8–10 ದಿವಸಗಳಲ್ಲಿ ಒಂದು ಸಭೆ ಕರೆಯೋಣ. ಅವರು ಕರೆಯತಕ್ಕಂಥ ಸಭೆಯಲ್ಲಿ ಏನೇನು ವಿಚಾರಗಳಿವೆಯೋ, ಅದನ್ನೆಲ್ಲಾ ಚರ್ಚೆ ಮಾಡೋಣ. ನಮ್ಮ ಈ ಮೂರೂ ಜಿಲ್ಲೆಗಳಿಗೆ ಸಂಬಂಧಪಡತಕ್ಕಂಥ ಶಾಸಕರು ಗಳನ್ನೂ ಸಹಿತ ಬರಮಾಡಿಕೊಂಡು, ಅವತ್ತು, ಒಂದು ನಿರ್ದಿಷ್ಟವಾಗಿರತಕ್ಕಂಥ ಕಾರ್ಯ

ಕ್ರಮವನ್ನು ಹಾಗೂ ಸರ್ಕಾರ ಮಾಡಬೇಕಾದುದು ಏನಿದೆ, ಅಪೆಕ್ಸ್ ಬ್ಯಾಂಕ್ ಮಾಡಬೇಕಾದುದು ಏನಿದೆ, ನಬಾರ್ಡ್ ಮಾಡಬೇಕಾದುದು ಏನಿದೆ, Reserve Bank ಮಾಡಬೇಕಾದುದು ಏನಿದೆ ಎಂಬುದನ್ನೂ ಚರ್ಚಿಸೋಣ. Reserve Bank representative ಅನ್ನು ಕರೆಯೋಣ, NABAR Representative ಅನ್ನು ಕರೆಯೋಣ, Apex Bank ನವರನ್ನೂ ಕರೆಯೋಣ. ಇವರೆಲ್ಲರನ್ನೂ ಕರೆದು, ಚರ್ಚೆ ಮಾಡಿ, ಅವರ ನೇತೃತ್ವದಲ್ಲಿ ಏನು ನಿರ್ದೇಶನ ಕೊಡುತ್ತಾರೋ, ಆ ನಿರ್ದೇಶನದಂತೆ ಈ ಪುನಶ್ಚೇತನ ಕೆಲಸವನ್ನು ಕೈಗೊಳ್ಳುತ್ತೇವೆ. ಇನ್ನು 8–10 ದಿವಸಗಳಲ್ಲಿ ಅವರ ಅನುಕೂಲತೆಯನ್ನು ನೋಡಿಕೊಂಡು, ಈ ಸಭೆಯನ್ನು ನಾವು ಗೊತ್ತುಪಡಿಸುತ್ತೇವೆ ಅನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಆಂಜನೇಯವರೆ, ಎರಡೇ ನಿಮಿಷಗಳಲ್ಲಿ ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಎಸ್.ಎಸ್. ಪಾಟೀಲ್:– ಸನ್ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ಮಾತು ಹೇಳಬಯಸುತ್ತೇನೆ. ದಯವಿಟ್ಟು ಇದು ಬಹಳ ಮಹತ್ವದ್ದು ಇಲ್ಲಿ Special Officer ನವರು ಬರೆದಿರುವುದನ್ನು ಹೇಳುತ್ತೇನೆ, ದಯವಿಟ್ಟು ಕೇಳಿ. ಇನ್ನು 2–3 ತಿಂಗಳುಗಳಲ್ಲಿ ಬ್ಯಾಂಕೇ ಬಂದ್ ಆಗಿ ಹೋಗುತ್ತದೆ. ನಮಗೇನೂ ದುಡ್ಡೇ ಇಲ್ಲ, ನೌಕರರುಗಳಿಗೆ ಪಗಾರ ಕೊಡಲಿಕ್ಕೆ ದುಡ್ಡು ಇಲ್ಲವೆಂದು ಅವರು ಬರೆದಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:– ಇನ್ನು 8–10 ದಿವಸಗಳಲ್ಲಿ ಆ ಸಭೆಯನ್ನು ಮಾಡಿಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್:– ಸಭೆಯನ್ನೂ ಮಾಡಿಸಿರಿ, ಅದರ ಜೊತೆಗೆ ದುಡ್ಡೂ ರಿಲೀಸ್ ಮಾಡಿಸಿ...

ಉಪಾಧ್ಯಕ್ಷರು:– ಆಂಜನೇಯರವರೆ, ತಾವು ಮಾತನಾಡಿ. ಎರಡೇ ನಿಮಿಷಗಳಲ್ಲಿ ಮುಗಿಸಿ.

ವಿಷಯ: ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಆಟೋರಿಕ್ಷಾ ವಿತರಣೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಸಿ.ಓ.ಡಿ. ತನಿಖೆಗೆ ವಹಿಸಿರುವುದನ್ನು ರದ್ದುಪಡಿಸುವ ಬಗ್ಗೆ.

ಶ್ರೀ ಹೆಚ್. ಆಂಜನೇಯ (ಭರಮಸಾಗರ):– ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಮಾಜ ಕಲ್ಯಾಣ ಸಚಿವರಾಗಿರತಕ್ಕಂಥ